**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

ದಿನಾಂಕಃ **28/07/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಹೆಚ್ ಕೆ ನಾಗರಾಜು |
| ತಂದೆ ಹೆಸರುಃ | ಕೆಂಪಯ್ಯ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ಅಬಕಾರಿ ನಿರೀಕ್ಷಕರು |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

ನಾನು ದಿಃ04.03.2018 ರಿಂದ 20.11.2018 ರವರೆಗೆ ಅಬಕಾರಿ ಉಪ ಆಯುಕ್ತರವರ ಕಚೇರಿ, ಮೈಸೂರಿನಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ06/05/2018 ರಂದು ವಿಧಾನ ಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸಿಬ್ಬಂದಿಯಾದ ಚಾಸಾ-1 ಮತ್ತು ಜೀಪು ಚಾಲಕರಾದ ಚಾಸಾ-3 ರವರೊಂದಿಗೆ ಗಸ್ತು ಮಾಡುತ್ತಾ ಪಿರಿಯಾಪಟ್ಟಣ ತಾಲ್ಲೂಕಿನ ಅಬಕಾರಿ ನಿರೀಕ್ಷಕರ ಕಚೇರಿಗೆ ಬೇಟಿ ನೀಡಿರುತ್ತೇನೆ. ಸಿಬ್ಬಂದಿಯಾದ ಸುನೀಲ ಮತ್ತು ಚಾಸಾ-2 ರವರನ್ನು ಕರೆದುಕೊಂಡು ಬೈಲುಕುಪ್ಪೆಯ ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ ಮಾಹಿತಿ ಬಂದ ಸ್ಥಳವಾದ ಬೈಲುಕುಪ್ಪೆಯಿಂದ ಸುಮಾರು 700 ಮೀಟರ್ ದೂರದಲ್ಲಿರುವ ಸೌಮ್ಯ ಕೋಂ ಲಕ್ಷ್ಮಣ ರವರ ಮನೆ ಹತ್ತಿರ ಹೋದಾಗ ಆ ಮನೆಯಲ್ಲಿದ್ದ ಮಹಿಳೆ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಓಡಿ ಹೋದ ಮಹಿಳೆ ಯಾರು ಎಂದು ಅಲ್ಲಿದ್ದ ಸಾರ್ವಜನಿಕರಲ್ಲಿ ಕೇಳಿದಾಗ ಸೌಮ್ಯ ಎಂದು ಹೇಳಿರುತ್ತಾರೆ. ನಾವು ಬಂದಿರುವ ವಿಚಾರವನ್ನು ಸಾರ್ವಜನಿಕರಿಗೆ ತಿಳಿಸಿದಾಗ ಪಂಚರಾಗಿ ಬರಲು ನಿರಾಕರಿಸಿರುತ್ತಾರೆ. ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ಕಾಲಾವಕಾಶ ಇಲ್ಲದೇ ಇರುವ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ

ಅಧಾರವನ್ನು ಸ್ಥಳದಲ್ಲಿ ತಯಾರಿಸಿರುತ್ತೇನೆ. ಸಾರ್ವಜನಿಕರಲ್ಲಿ 2 ನೇ ಬಾರಿ ಪಂಚರಾಗುವಂತೆ ಕೋರಿಕೊಂಡಾಗ ಕೂಡ ನಿರಾಕರಿಸಿರುತ್ತಾರೆ. ಅವರು ನಿರಾಕರಿಸಿದ ಕಾರಣ ಇಲಾಖಾ ಸಿಬ್ಬಂದಿಗಳಾದ ಚಾಸಾ- 1 ಮತ್ತು 2 ರವರನ್ನು ಪಂಚರನ್ನಾಗಿ ಮಾಡಿಕೊಂಡು ಮನೆಯನ್ನು ಶೋಧನೆ ಮಾಡಿರುತ್ತೇನೆ. ಮನೆಗೆ ಹೊಂದಿಕೊಂಡು ಅಡುಗೆ ಮನೆ ಇದ್ದು ಅಡುಗೆ ಮನೆಯ ಹಿಂಭಾಗದಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಕಂಡು ಬಂದಿರುತ್ತದೆ. ಅದನ್ನು ತೆರೆದು ನೋಡಿದಾಗ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಕಂಡು ಬಂದಿರುತ್ತದೆ. 180 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕಿ ಯ 27 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್.ನ ಹೈವರ್ಡ್ಸ್ ವಿಸ್ಕಿಯ 20 ಟೆಟ್ರಾ ಪ್ಯಾಕೇಟ್ , 90 ಎಂ.ಎಲ್.ನ ಕೊಡೆಸ್ ರಮ್ ನ 5 ಟೆಟ್ರಾ ಪ್ಯಾಕೇಟ್ ಗಳು , 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕಿ 9 ಟೆಟ್ರಾ ಪ್ಯಾಕೇಟ್ ಗಳು ಮತ್ತು 90 ಎಂ.ಎಲ್.ನ ಬೆಂಗಳೂರು ಮಾಲ್ಟ್ ವಿಸ್ಕಿಯ 20 ಟೆಟ್ರಾ ಪ್ಯಾಕೇಟ್ ಗಳು ಕಂಡು ಬಂದಿರುತ್ತದೆ. ಒಟ್ಟು 9.270 ಲೀಟರ್ ಮದ್ಯ ಇತ್ತು. ಸಾರ್ವಜನಿಕರಲ್ಲಿ ಸೌಮ್ಯ ರವರ ವಿಳಾಸ ಕೇಳಿದಾಗ ಸೌಮ್ಯ ಕೋಂ ಲಕ್ಷ್ಮಣ, 28 ವರುಷ, ಹಳೇ ಊರು, ಬೈಲುಕಪ್ಪೆ ಹಾರನಹಳ್ಳಿ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು ಎಂದು ತಿಳಿಸಿರುತ್ತಾರೆ. ದೊರೆತಿರುವ ಮದ್ಯದ ಟೆಟ್ರಾ ಪ್ಯಾಕೇಟ್ ಗಳಲ್ಲಿ ತಲಾ 2 ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿರುತ್ತೇವೆ. ಸದರಿ ಟೆಟ್ರಾ ಪ್ಯಾಕೇಟ್ ಗಳನ್ನು ಬಿಳಿ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ದಾರದಿಂದ ಕಟ್ಟಿ ಇಲಾಖಾ ಸೀಲು ಹಾಕಿರುತ್ತೇನೆ. ಮಾದರಿ ಚೀಟಿಯನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡು ಅದರ ಮೇಲೆ ಅಂಟಿಸಿರುತ್ತೇನೆ. ಮಾದರಿ ಮೊಹರನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಮು.ಮಾಲುಗಳನು ಇಲಾಖಾ ವಶಕ್ಕೆ ಪಡೆದುಕೊಂಡು ಪ್ರಕರಣವನ್ನು ದಾಖಲಿಸುವುದಾಗಿ ಸಾರ್ವಜನಿಕರಿಗೆ ತಿಳಿಸಿರುತ್ತೇನೆ. ಮಹಜರನ್ನು ಸಂಜೆ 5.45 ರಿಂದ 6.45 ರವರೆಗೆ ಮನೆಯ ಮುಂದೆ ಇರುವ ಬೀದಿ ದೀಪದ ಬೆಳಕಿನಲ್ಲಿ ಚಾಸಾ-2 ರವರು ಬರೆದಿರುತ್ತಾರೆ. ಕಚೇರಿಗೆ ತೆರಳಿದ ನಂತರ ಆರೋಪಿಯ ವಿರುದ್ಧ

ಪ್ರಥಮ ವರ್ತಮಾನ ವರದಿ ಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

3. ನಿಪಿ–1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1(ಸಿ)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿ ಯನ್ನು **ನಿ.ಪಿ.5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.5(ಎ)** ಎಂದು ಗುರುತಿಸಲಾಯಿತು. ಶೊಧನಾ ಸಮುಚ್ಚಿತ್ತ ಆಧಾರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಶೊಧನಾ ಸಮುಚ್ಚಿತ್ತ ಆಧಾರವನ್ನು **ನಿ.ಪಿ6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.6(ಎ)** ಎಂದು ಗುರುತಿಸಲಾಯಿತು. ಮಾದರಿ ಮೊಹರಿನ ನಕಲಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಮಾದರಿ ಮೊಹರಿನ ನಕಲನ್ನು **ನಿ.ಪಿ.7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.7(ಎ)** ಎಂದು ಗುರುತಿಸಲಾಯಿತು. ಸ್ವತ್ತು ಪಟ್ಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸ್ವತ್ತು ಪಟ್ಟಿಯನ್ನು **ನಿ.ಪಿ.8** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ 8(ಎ)** ಎಂದು ಗುರುತಿಸಲಾಯಿತು.

(**ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಬಿಯೋಜಕರಿಂದ**

90 ಎಂ.ಎಲ್.ನ ಒಲ್ಡ್ ಟಾವೆರಿನ್ ವಿಸ್ಕಿಯ 9 ಟೆಟ್ರಾ ಪ್ಯಾಕೇಟ್ ಗಳು ಮತ್ತು ಬೆಂಗಳೂರು ಮಾಲ್ಟ್ ವಿಸ್ಕಿಯ 20 ಟೆಟ್ರಾ ಪ್ಯಾಕೇಟ್ ಗಳು ಇತ್ತು ಎಂದರೆ ಸರಿ.

**(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹಿಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**